ಮದರಾಸಿನ ಕಲಾಕ್ಷೇತ್ರದ ಬಗ್ಗೆ ಲೇಖನ ಬರೆಯುವ ಪ್ರಯತ್ನದಲ್ಲಿ ಒಂದೆರಡು ಬಾರಿ ಅಲ್ಲಿಗೆ ಹೋಗಿದ್ದೆ. ಹಾಗೊಮ್ಮೆ ವಿಷಯ ಸಂಗ್ರಹಿಸುತ್ತಿದ್ದಾಗ, ಚಿತ್ರಕಲಾ ವಿಭಾಗದ ಶಿಕ್ಷಕರಾಗಿದ್ದ ಆಂಜನೇಯಲು, 'ನಿಮ್ಮ ಕಾರಂತರ ಮಗಳು ನನ್ನ ವಿದ್ಯಾರ್ಥಿನಿ! ಬನ್ನಿ ಅವರನ್ನು ಭೇಟಿ ಮಾಡಿ' ಎಂದು ನನ್ನನ್ನು ತರಗತಿಗೆ ಕರದೊಯ್ದರು. ವಿದ್ಯಾರ್ಥಿನಿ ಕ್ಷಮಾ ಒಂದು ಕಿಟಕಿಯ ಬಳಿ ಕುಳಿತು ಚಿತ್ರ ರಚನೆಯಲ್ಲಿ ತೊಡಗಿದ್ದರು. ಕನ್ನಡದಲ್ಲಿ ಮಾತಾಡಿಸಿದಾಗ ಅವರ ಮುಖ ಅರಳಿತು. ನನ್ನ ಪುತ್ತೂರು ನೆನಪನ್ನು ಬಿಚ್ಚಿದೆ. ಸುಮಾರು ಆರೇಳು ಸಲ ಮಾತ್ರ ಅವರ ಮನೆಗೆ ಹೋಗಿದ್ದ ನನ್ನ ನೆನಪು ಅವರಿಗಿದ್ದಿರಲು ಸಾಧ್ಯವಿರಲಿಲ್ಲ. ಅವರು ಚಿತ್ರ ರಚಿಸುತ್ತಿದ್ದ ಭಂಗಿಯಲ್ಲಿ ಒಂದೆರಡು ಫೋಟೊ ಕ್ಲಿಕ್ಕಿಸಿದೆ.

ಕಾರಂತರು ಒಮ್ಮೆ ಮದರಾಸಿನ ತ್ಯಾಗರಾಯ ನಗರದಲ್ಲಿರುವ ಕರ್ನಾಟಕ ಸಂಘದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಬಂದಿದ್ದಾಗ ಅವರನ್ನು ಮತ್ತೆ ಭೇಟಿ ಮಾಡುವ ಅವಕಾಶ ದೊರಕಿತು.

ಆಫೀಸು ಕೋಣೆಯಲ್ಲಿ ಕುಳಿತು ಗೆಳೆಯರೊಂದಿಗೆ ಮಾತಾಡುತ್ತಿದ್ದರು ಶಿಂಗಣ್ಣನ ಪತ್ರಿಕೆಯ ಹೆಸರು ಹೇಳಿ ನನ್ನ ಪರಿಚಯ ಮಾಡಿಕೊಂಡೆ, ಅವರ ನೆನಪು ಹಿಂದಕ್ಕೋಡಿತು. ಮುಖದಲ್ಲಿ ಪರಿಚಯದ ನಗೆ ಅರಳಿತು.

ಆ ವೇಳೆಗೆ ನಾನು ಹೆಗಲ ಚೀಲದಲ್ಲಿ ಕ್ಯಾಮೆರಾ ಹಾಕಿಕೊಂಡು ತಿರುಗಾಡುವ ಹವ್ಯಾಸಕ್ಕೆ ಬಿದ್ದಿದ್ದೆ. ಸಹಜ ಭಂಗಿಯಲ್ಲಿ ಅವರ ಫೋಟೊ ತೆಗೆಯುವ ಉದ್ದೇಶದಿಂದ, 'ಹಾಗೇ ಮಾತಾಡುತ್ತ ಇರಿ ಸಾರ್!' ಎನ್ನುತ್ತ ಫೋಕಸ್ ಮಾಡತೊಡಗಿದೆ. ಒಂದೆರಡು ಫೋಟೊ ತೆಗೆದಿರಬಹುದು. ಕಾರಂತರು ದೊಡ್ಡದಾಗಿ ನಕ್ಕು 'ನೀವು ಮಾತುಗಳನ್ನೂ ಫೋಟೊ ತೆಗೆಯುವವರೋ!' ಎನ್ನುತ್ತ ಅಲ್ಲಿದ್ದವರನ್ನು ನಗೆಯಲ್ಲಿ ಮುಳುಗಿಸಿದರು.

ಆ ನಗೆಯ ಅಲೆಯಲ್ಲಿ ನಾನೂ ತೇಲಿದೆ ! (ಚಿತ್ರಗಳು: ಲೇಖಕರವು)

## ಪರಂಜ್ಯೋತಿ

ಪರಂಜ್ಯೋತಿ, ನೀಲಾಂಬರಿ ಎಂಬ ಕಾವ್ಯನಾಮಗಳಲ್ಲಿ ಪತ್ರಿಕೆಗಳಿಗೆ ಬರೆಯುತ್ತ ಬಂದವರು ಕೆ.ಪಿ. ಸ್ವಾಮಿ. ಅವರ ಕಾದಂಬರಿ, ಕಥಾ ಸಂಗ್ರಹ, ಪ್ರಬಂಧ, ಪ್ರವಾಸ ಸಾಹಿತ್ಯ, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆಗಳಿಗೆ ಸೇರಿದಂತೆ 30 ಪುಸ್ತಕಗಳು ಪ್ರಕಟವಾಗಿವೆ. ಅವರ ಬರವಣಿಗೆಯ ಬದುಕಿಗೆ ಈಗ ಅರ್ಧಶತಮಾನ.

ಹುಟ್ಟಿದ್ದು ನೀಲಗಿರಿಯಲ್ಲಿ, ಓದಿದ್ದು ಮಂಡ್ಯದಲ್ಲಿ. ಚಹಾ ಎಸ್ಟೇಟ್‌ನಲ್ಲಿ ಮೇಸ್ತ್ರಿಯಾಗಿ ವೃತ್ತಿ ಆರಂಭಿಸಿದ ಅವರು ಅಪ್ಪರ್ ಭವಾನಿ ಅಣೆಕಟ್ಟೆ ಯೋಜನೆಯಲ್ಲಿ, ಪುತ್ತೂರಿನಿಂದ ಪ್ರಕಟವಾಗುತ್ತಿದ್ದ 'ಇಂದ್ರಧನುಸ್' ಮಾಸಪತ್ರಿಕೆ, ಬೆಂಗಳೂರಿನಿಂದ ಹೊರಡುತ್ತಿದ್ದ 'ಪ್ರಪಂಚ' ವಾರಪತ್ರಿಕೆಗಳಲ್ಲಿ ಪತ್ರಕರ್ತರಾಗಿ ಕೆಲಸ ಮಾಡಿದ್ದಾರೆ. ಚೆನ್ನೈನ ಸೋವಿಯತ್ ಸಮಾಚಾರ ಇಲಾಖೆಯಲ್ಲಿ ಗುಮಾಸ್ತರಾಗಿ, ಅನುವಾದಕರಾಗಿ 25 ವರ್ಷ ಕೆಲಸ ಮಾಡಿ, ಬಳಿಕ ನವಕರ್ನಾಟಕ ಪ್ರಕಾಶನದಲ್ಲಿ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಮಕ್ಕಳ ಪುಸ್ತಕಗಳು, ಹಿಂದಿ, ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.